**Karnataka State Seed & Organic Certification Agency**
(Govt. of Karnataka Organisation)
**ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ**
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
(K.A.I.C.) Premises, Opp.Baptist Hospital, Bellary Road, Hebbal, Bangalore-560 024
Ph : 080-23415505 Fax : 080-23415506 e-mail : dscbng@gmail.comwebsite : www.kssoca.org

ಸಂಖ್ಯೆ: ಕರಾಬೀಮಸಾಪ್ರಸಂ/ಆಡಳಿತ/ಬೀಪ್ರ/ಹೈಕನೇ/2018-19 ದಿನಾಂಕ: 28.02.2019

# ಪ್ರಕಟಣೆ

**ವಿಷಯ :** ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸಂವಿಧಾನ ಅನುಚ್ಛೇದ 371-ಜೆ ಅಡಿಯಲ್ಲಿ ಈ ಸಂಸ್ಥೆಯಲ್ಲಿ ಖಾಲಿ ಇರುವ ಸಾಮಾನ್ಯ ಅರ್ಹತೆ ಮೀಸಲಾತಿಯಡಿಯ **ಅಂಗವಿಕಲ ಅಭ್ಯರ್ಥಿ (PHC) ಒಂದು ಹುದ್ದೆಯನ್ನು** ಭರ್ತಿ ಮಾಡಲು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿರುವ ಬಗ್ಗೆ ಸ್ವೀಕೃತವಾದ ಆಕ್ಷೇಪಣೆ ಕುರಿತಂತೆ.

**ಉಲ್ಲೇಖ :** ಈ ಕಛೇರಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಸಂಖ್ಯೆ: ಕರಾಬೀಮಸಾಪ್ರಸಂ/ಆಡಳಿತ/ತಾಆಪ-ಬೀಪ್ರ/2018-19 ದಿನಾಂಕ: 13.02.2019.

*****

ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯಲ್ಲಿ ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸಂವಿಧಾನ ಅನುಚ್ಛೇದ 371-ಜೆ ಅಡಿಯಲ್ಲಿ ಭರ್ತಿ ಮಾಡಬೇಕಾಗಿರುವ ಸಾಮಾನ್ಯ ಅರ್ಹತೆ ಮೀಸಲಾತಿಯಡಿಯ ಅಂಗವಿಕಲ ಅಭ್ಯರ್ಥಿ-01 ಹುದ್ದೆಗೆ ಉಲ್ಲೇಖಿತ ಪ್ರಕಟಣೆಯಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿ ಈ ಸಂಬಂಧ ಆಕ್ಷೇಪಣೆಗಳಿದ್ದಲ್ಲಿ ಅಭ್ಯರ್ಥಿಗಳು ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಸಲ್ಲಿಸುವಂತೆ ತಿಳಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಸ್ವೀಕೃತಗೊಂಡ ಆಕ್ಷೇಪಣೆಗಳನ್ನು ಪರಿಶೀಲಿಸಿದ್ದು, ಅಭ್ಯರ್ಥಿಗಳಿಂದ ಸ್ವೀಕೃತಗೊಂಡ ಆಕ್ಷೇಪಣೆಗಳಿಗೆ ಉತ್ತರಗಳ ಮಾಹಿತಿಯನ್ನು ಅನುಬಂಧದಲ್ಲಿ ತೋರಿಸಿ ಪ್ರಕಟಿಸಿದೆ.

28/02/19
ನಿರ್ದೇಶಕರು

D/S/Admin

## ಅನುಬಂಧ

| ಕ್ರ ಸಂ | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ಅರ್ಜಿ ಸಂಖ್ಯೆ | ಸ್ವೀಕೃತಗೊಂಡ ಆಕ್ಷೇಪಣೆ | ಆಕ್ಷೇಪಣೆಗೆ ಉತ್ತರ |
|---|---|---|---|---|
| 01 | ಕಿರಣ್ ಕುಮಾರ್ ಧನರಾಜ್ | KSSOCA2017000161 | ಇವರ ಆಕ್ಷೇಪಣಾ ಪತ್ರ ದಿನಾಂಕ: 19.02.2019 ರಲ್ಲಿ ಕೆಳಕಂಡಂತೆ ಉಲ್ಲೇಖಿಸಿ ವಿವರಿಸಿರುತ್ತಾರೆ.<br>ಉಲ್ಲೇಖ:1. Notification: ಕರಾಬೀಮಸಾಪ್ರಸಂ/ ಆಡಳಿತ/ ಬೀಪ್ರಅ/ಹೈಕನೇ/ 2017-18 ದಿ: 04.12.2017<br>2. Merit List: ಅನುಬಂಧ-2<br>3. Document Verification: ಅನುಬಂಧ-1<br>4. ಹೈಕಬೀಪ್ರಅ ಹುದ್ದೆಯ ಪರಿಷ್ಕೃತ ಮೆರಿಟ್ ಪಟ್ಟಿ ದಿನಾಂಕ: 16.01.2018.<br>5. ಕರಾಬೀಮಸಾಪ್ರಸಂ/ಬೀಪ್ರಅ/ಹೈಕನೇ/2018-19 ದಿನಾಂಕ: 21.12.2018.<br><br>ಸದರಿಯವರು ಉಲ್ಲೇಖ(1)ರಲ್ಲಿರುವಂತೆ, ದಿನಾಂಕ: 04.12.2017 ರಂದು ಕರಾಬೀಮಸಾಪ್ರಸಂಸ್ಥೆ, ಹೈ.ಕರ್ನಾಟಕ ಮೀಸಲಾತಿಯನ್ವಯ 08 ಹುದ್ದೆಗಳ ನೇರ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆಯೆಂದು, ಉಲ್ಲೇಖ(2)ರನ್ವಯ ಅನುಬಂಧ-2ರಲ್ಲಿ Serial No: 133, ಶ್ರೀ ಚಂದ್ರಶೇಖರ ರವರು 2A (CGPA-7.67) ಮೀಸಲಾತಿಯನ್ನು ಅರ್ಜಿ ಸಲ್ಲಿಸುವಾಗ ಕೋರಿರುತ್ತಾರೆಂದು ತಿಳಿಸಿರುತ್ತಾರೆ.<br><br>ಉಲ್ಲೇಖ(5)ರ ಕಂಡಿಕೆಯಂತೆ, ಶ್ರೀ ಚಂದ್ರಶೇಖರರವರು PHC ಮೀಸಲಾತಿಯನ್ನು ಪರಿಗಣಿಸುವಂತೆ ದಿ:16.01.18 ರಂದು ಕೋರಿರುತ್ತಾರೆಂದೂ, ಅದರನ್ವಯ ಅವರನ್ನು 'ವಿಶೇಷವಾಗಿ' PHC ಮೀಸಲಾತಿಯಲ್ಲಿ ಪರಿಗಣಿಸಿ, ದಿ:05.01.2019 ರಂದು (ಉಲ್ಲೇಖ-5) ಮೂಲ ದಾಖಲೆಗಳ ಪರಿಶೀಲನೆ ಮಾಡಲಾಗಿರುತ್ತದೆಯೆಂದೂ ತಿಳಿಸಿರುತ್ತಾರೆ.<br>ನಿಯಮದಂತೆ, KPSC, KEA & ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳ ನೇರ | ಈ ಕಛೇರಿ ಪ್ರಕಟಣೆ ಪತ್ರ ಸಂಖ್ಯೆ: ಕರಾಬೀಮಸಾಪ್ರಸಂ/ ಆಡಳಿತ/ಬೀಪ್ರಅ/ಹೈಕನೇ/2017-18 ದಿನಾಂಕ: 04.12.2017 ರಲ್ಲಿ ತಾತ್ಕಾಲಿಕ ಮೆರಿಟ್ ಪಟ್ಟಿ (Common Merit List of Applications)ಯನ್ನು ಈ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸುವಂತೆ ಅಭ್ಯರ್ಥಿಗಳಿಗೆ ತಿಳಿಸಲಾಗಿತ್ತು. ಸದರಿ ಮೆರಿಟ್ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 133 ರಲ್ಲಿರುವ ಶ್ರೀ ಚಂದ್ರಶೇಖರ್ ಎಂಬ ಅಭ್ಯರ್ಥಿಯು Category 2Aನಲ್ಲಿ ಅರ್ಜಿ ಸಲ್ಲಿಸಿ ಅರ್ಜಿಯ Group Columnನಲ್ಲಿ ಮಾಹಿತಿ ನಮೂದಿಸಿರುವುದಿಲ್ಲ ಕಾರಣ, Category 2A othersನಲ್ಲಿ ಇವರನ್ನು ಪರಿಗಣಿಸಲಾಗಿತ್ತು.<br><br>ಸದರಿ ಶ್ರೀ ಚಂದ್ರಶೇಖರ್ ರವರ ಆಕ್ಷೇಪಣಾ ಪತ್ರ ದಿನಾಂಕ 15.12.2017 ರಲ್ಲಿ ಇವರು By mistake I submitted the application under category 2A PHC. But I should have filed application under General category PHC. The said mistake is bonafide and not intentional, besides the same is curable one ಎಂದು ನಮೂದಿಸಿದ್ದು under Category General Merit PHC ಯಲ್ಲಿ ಪರಿಗಣಿಸಲು ವಿನಂತಿಸಿರುವುದನ್ನು ನೇರ ನೇಮಕಾತಿ ಸಮಿತಿಯು ಸ್ವೀಕೃತಗೊಂಡ ಆಕ್ಷೇಪಣೆಯನ್ನು ಪರಿಶೀಲಿಸಿ, ಈ ಹಂತದಲ್ಲಿ ಆಕ್ಷೇಪಣೆ ಕುರಿತು ಯಾವುದೇ ಕ್ರಮ ಅಗತ್ಯವಿರುವುದಿಲ್ಲವೆಂದು ಆಯ್ಕೆ ಪಟ್ಟಿ ಸಮಯದಲ್ಲಿ ಅರ್ಹತೆಗನುಸಾರವಾಗಿ ಪರಿಗಣಿಸಲು ಸಮಿತಿಯು ನಿರ್ಣಯಿಸಿರುತ್ತದೆ. ಈ ಮಾಹಿತಿಯನ್ನು ಈ ಕಛೇರಿ ಪ್ರಕಟಣೆ ಪತ್ರ ಸಂಖ್ಯೆ: ಕರಾಬೀಮಸಾಪ್ರಸಂ/ಬೀಪ್ರ/ಹೈಕನೇ/2017-18 |

| | | | | |
|---|---|---|---|---|
| | | | ನೇಮಕಾತಿಯಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಕೋರಿದ ಮೀಸಲಾತಿಯನ್ನು ಪರಿಗಣಿಸಿ ಮೆರಿಟ್‌ಲಿಸ್ಟ್‌ನ್ನು ಪ್ರಕಟಿಸಲಾಗುತ್ತದೆಯೆಂದೂ ಆದರೆ, ಸದರಿ ನೇಮಕಾತಿಯಲ್ಲಿ ಶ್ರೀ ಚಂದ್ರಶೇಖರ ರವರ ಪ್ರಕರಣದಲ್ಲಿ ಬೀಜ ಪ್ರಸರಣ ಹುದ್ದೆಗೆ ಅರ್ಜಿಯನ್ನು ಸಲ್ಲಿಸುವಾಗ PHC ಮೀಸಲಾತಿಯನ್ನು ಕೋರಿರುವುದಿಲ್ಲ (ಉಲ್ಲೇಖ-2)ವೆಂದೂ, ಸದರಿ ಅಭ್ಯರ್ಥಿಯು ನೇಮಕಾತಿಯ ಮಧ್ಯಂತರ ಹಂತದಲ್ಲಿ PHC ಮೀಸಲಾತಿಯನ್ನು ಪರಿಗಣಿಸಿ ಅವರನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನೇಮಕಾತಿ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.<br><br>ಇದರನ್ವಯ ನೇರ ನೇಮಕಾತಿಯ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಸದರಿ ಅಭ್ಯರ್ಥಿಯನ್ನು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನೇಮಕಾತಿ ಹೊಂದಿರುವುದನ್ನು ಪರಿಗಣಿಸಿರುವುದನ್ನು ಗಮನಿಸಿದರೆ ನೇಮಕಾತಿಯಲ್ಲಿ ಪಾರದರ್ಶಕವಾಗಿ ನಡೆದಿರುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆಯೆಂದು ತಿಳಿಸಿರುತ್ತಾರೆ.<br><br>ಉಲ್ಲೇಖ(4)ರಲ್ಲಿರುವಂತೆ, ಸದರಿ ಹುದ್ದೆಗೆ ಶ್ರೀ ಗಡ್ಡೆಪ್ಪ Merit List Serial No: 132 (PH, 2A, CGPA 7.68) ರವರ ನಂತರದಲ್ಲಿ (ಸ್ಥಾನದಲ್ಲಿ) ಇವರನ್ನು ಪರಿಗಣಿಸಬೇಕಾಗಿತ್ತೆಂದೂ, ಈಗಾಗಲೇ ಇವರ ಮೂಲದಾಖಲಾತಿಗಳ ಪರಿಶೀಲನೆಯೂ ಮುಗಿದಿರುತ್ತದೆಯೆಂದೂ ಆದರೆ ಆ ಸ್ಥಾನದಲ್ಲಿ ಶ್ರೀ ಚಂದ್ರಶೇಖರ ರವರನ್ನು ವಿಶೇಷವಾಗಿ PHC ಮೀಸಲಾತಿ ನೀಡಿ ಅವರನ್ನು ತಾತ್ಕಾಲಿಕ ಹುದ್ದೆಗೆ ಆಯ್ಕೆ ಮಾಡಿರುವುದರಿಂದ ಇವರಿಗೆ ಅನ್ಯಾಯವಾಗಿ ನ್ಯಾಯಯುತವಾಗಿ ದೊರೆಯಬೇಕಾದ ಹುದ್ದೆ ಕೈ ತಪ್ಪಿ ಶ್ರೀ ಚಂದ್ರಶೇಖರ ರವರಿಗೆ ಹುದ್ದೆಯನ್ನು ನೀಡಲಾಗಿದೆಯೆಂದೂ ತಿಳಿಸಿರುತ್ತಾರೆ.<br><br>ಈ ಮೇಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಇವರಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ನೇಮಕಾತಿ ಮಾಡಿ ಶೀಘ್ರವಾಗಿ ನ್ಯಾಯ ಒದಗಿಸಬೇಕಾಗಿ ಕೋರಿರುತ್ತಾರೆ. | ದಿ:16.01.2018 ರಲ್ಲಿ ಸ್ಪಷ್ಟವಾಗಿ ನಮೂದಿಸಿ ಪರಿಷ್ಕೃತ ಮೆರಿಟ್ ಪಟ್ಟಿಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ದಿನಾಂಕ:17.01.2018 ರಂದು ಪ್ರಕಟಿಸಲಾಗಿರುತ್ತದೆ.<br><br>ದಿನಾಂಕ: 20.06.2018 ರಂದು ಜರುಗಿದ ಸಂಸ್ಥೆಯ 102ನೇ ಆಡಳಿತ ಮಂಡಳಿ ಸಭೆಯಲ್ಲಿ PHC ಗುಂಪಿನ ಒಂದು ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ, ಪ್ರಕಟಿಸಲಾಗಿರುವ ಮೆರಿಟ್ ಪಟ್ಟಿಯಲ್ಲಿ ಒಟ್ಟು 11 ಅಭ್ಯರ್ಥಿಗಳು ಅಂಗವಿಕಲತೆ (PHC) ಗುಂಪಿಗೆ ಸೇರಿರುವ ಬಗ್ಗೆ ಹಾಗೂ ಈ ಹಿಂದೆ ಅಭ್ಯರ್ಥಿಗಳಿಂದ ಸ್ವೀಕರಿಸಲ್ಪಟ್ಟ ಆಕ್ಷೇಪಣೆಗಳಲ್ಲಿ ಶ್ರೀ ಚಂದ್ರಶೇಖರ್ ಎಂಬ ಅಭ್ಯರ್ಥಿಯು PHC ಗುಂಪಿಗೆ ಸೇರಿರುವ ಬಗ್ಗೆ ಪ್ರಸ್ತಾಪಿಸಿರುವ ಕುರಿತಂತೆ ನೇರ ನೇಮಕಾತಿ ಸಮಿತಿಯು ಇವರ ಮನವಿಯನ್ನು ಆಯ್ಕೆ ಪಟ್ಟಿ ಸಮಯದಲ್ಲಿ ಅರ್ಹತೆಗನುಸಾರವಾಗಿ ಪರಿಗಣಿಸಿ ನಿರ್ಣಯಿಸಿರುವುದನ್ನು ಆಡಳಿತ ಮಂಡಳಿಯು ಅವಗಾಹಿಸಿ, ಈ ಅಭ್ಯರ್ಥಿಯು ಸೇರಿದಂತೆ ಒಟ್ಟು 12 ಮಂದಿ PHC ಗುಂಪಿಗೆ ಸೇರಿದವರಾಗಿರುವ ಬಗ್ಗೆ ಮಾಹಿತಿ ಪಡೆದು ಆಯ್ಕೆ ಪಟ್ಟಿಗೆ ಅರ್ಹತೆ ಹೊಂದಿದ ಈಗಾಗಲೇ ದಾಖಲಾತಿಗಳ ಪರಿಶೀಲನೆಗೊಳಪಟ್ಟ PHC ಗುಂಪಿನ ಇಬ್ಬರು ಅಭ್ಯರ್ಥಿಗಳಾದ ಶ್ರೀ ಬಸವರಾಜ ಮತ್ತು ಶ್ರೀ ಗಡ್ಡೆಪ್ಪ ಇವರ ವೈದ್ಯಕೀಯ ದಾಖಲಾತಿಗಳು ಮೇಲ್ನೋಟಕ್ಕೆ ದೃಷ್ಟಿಮಾಂದ್ಯಕ್ಕೆ ಸಂಬಂಧಪಟ್ಟಿರುವುದು ಪರಿಶೀಲನಾ ಸಮಯದಲ್ಲಿ ಕಂಡು ಬಂದಿರುವ ಬಗ್ಗೆ ಆಡಳಿತ ಮಂಡಳಿಯು ಅವಗಾಹಿಸಿ, PHC ಗುಂಪಿನ ಉಳಿದ 10 ಮಂದಿಯ ದಾಖಲಾತಿಗಳನ್ನು ಸಹ ಪರಿಶೀಲನೆಗೊಳಪಡಿಸುವಂತೆ ಸೂಚಿಸಲಾಗಿರುತ್ತದೆ. ಇದರಂತೆ ಕ್ರಮವಹಿಸಲಾಗಿರುತ್ತದೆ.<br>ಈ ಸಂಸ್ಥೆಯ 103ನೇ ಆಡಳಿತ ಮಂಡಳಿ ಸಭೆಯ ನಿರ್ಣಯದನ್ವಯ ಅಂಗವಿಕಲ (PHC) ಗುಂಪಿನ ಒಂದು ಹುದ್ದೆಗೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು 1:3 ಅನುಪಾತದಲ್ಲಿ ಪ್ರಕಟಿಸಲಾಗಿರುತ್ತದೆ. |

| | | | | |
|---|---|---|---|---|
| | | | | ಇದರನ್ವಯ ಅಂಗವಿಕಲ-01 ಹುದ್ದೆಗೆದುರಾಗಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಕ್ರಮ ಸಂಖ್ಯೆ: 03ರಲ್ಲಿ ಶ್ರೀ ಚಂದ್ರಶೇಖರ್ ಅಭ್ಯರ್ಥಿಯ ಹೆಸರನ್ನು ಪ್ರಕಟಿಸಿರುವುದು ಕ್ರಮಾನುಸಾರವಾಗಿರುತ್ತದೆ.<br><br>ನೇಮಕಾತಿ ಪ್ರಕ್ರಿಯೆಯು ಪಾರದರ್ಶಕವಾಗಿರುತ್ತದೆ.<br>ಇವರು ನೇಮಕಾತಿಯಲ್ಲಿ ಪಾರದರ್ಶಕವಾಗಿ ನಡೆದಿರುವುದಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆಯೆಂದು ತಿಳಿಸಿರುವುದು ಸತ್ಯಕ್ಕೆ ದೂರವಾದುದು.<br><br>ಆದ್ದರಿಂದ ಇವರ ಆಕ್ಷೇಪಣೆಯನ್ನು ಅಂಗೀಕರಿಸಿಲ್ಲ. |

06/03/19

ನಿರ್ದೇಶಕರು
ಕರ್ನಾಟಕ ರಾಜ್ಯ ಬೀಜ ಮತ್ತು
ಸಾವಯವ ಪ್ರಮಾಣನ ಸಂಸ್ಥೆ,
**ಬೆಂಗಳೂರು**